ಅ) ರಂಗಭೂಮಿ ಕಲಾವಿದರು ಮತ್ತು ಇತರ ಕಲಾವಿದರುಗಳ ಮಾಸಾಶನಗಳನ್ನು ನೀಡಲು ಸರ್ಕಾರ ವಿಳಂಬ ಮಾಡುತ್ತಿರುವ ಉದ್ದೇಶವೇನು?

ಆ) ಈ ಕಲಾವಿದರುಗಳನ್ನು ಒಮ್ಮೆಯೇ ಗುರುತಿಸಿ ಅವರುಗಳಿಗೆ ಮಾಸಾಶನ ನೀಡಲು ಸರ್ಕಾರ ಯೋಜಿಸಿದೆಯೇ?

ಶ್ರೀ ಎಸ್. ರಮೇಶ್(ಯುವಜನಸೇವಾ, ಕ್ರೀಡಾ, ಹಾಗೂ ಕನ್ನಡ, ಸಂಸ್ಕೃತಿ ಸಚಿವರು):

ಅ) ಮಿತವ್ಯಯ ಆದೇಶ ಜಾರಿಯಲ್ಲಿದ್ದುದರಿಂದ ಮತ್ತು ಆಯವ್ಯಯದಲ್ಲಿನ ಹಣದ ಕೊರತೆಯ ಕಾರಣ ಕಳೆದ ನಾಲ್ಕು ವರ್ಷಗಳಿಂದ ಹೊಸದಾಗಿ ಯಾರಿಗೂ ಮಾಸಾಶನ ಮಂಜೂರು ಮಾಡಿರುವುದಿಲ್ಲ. ಆದರೆ ಪ್ರಸಕ್ತ ಸಾಲಿನಲ್ಲಿ ಮಾಸಾಶನ ಮಂಜೂರು ಮಾಡಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಆ) ಒಮ್ಮೆಲೇ ಮಂಜೂರಾತಿ ಮಾಡಲು ಸಾಧ್ಯವಾಗಲಾರದು.

ಪುಟ್ಟಣ್ಣ ಕಣಗಾಲ್ ಪ್ರಶಸ್ತಿ

2984-ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ಪುಟ್ಟಣ್ಣ ಕಣಗಾಲ್ ಪ್ರಶಸ್ತಿಯನ್ನು ಶ್ರೇಷ್ಠ ನಿರ್ದೇಶಕರಿಗೆ ನೀಡಬೇಕೆಂದು ಸರ್ಕಾರದ ನೀತಿ ಇಲ್ಲವೆ?

ಆ) ಆ ನೀತಿ ಇದ್ದರೂ ಪ್ರಶಸ್ತಿಯನ್ನು ಬೇರೆಯವರಿಗೂ ನೀಡಲು ಸರ್ಕಾರ ನಿರ್ಧರಿಸಿರುವ ಉದ್ದೇಶವಾದರೂ ಏನು?

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು):

ಅ) ಈಗ ಜಾರಿಯಲ್ಲಿರುವ ನಿಯಮಾವಳಿ ಪ್ರಕಾರ ಈ ಪ್ರಶಸ್ತಿಯನ್ನು ಚಲನಚಿತ್ರ ರಂಗದಲ್ಲಿ ನಿರ್ದೇಶನ ಸೇರಿದಂತೆ ನಟನೆ, ಸಂಗೀತ, ತಾಂತ್ರಿಕ ಕಾರ್ಯದಲ್ಲಿ ಪರಿಣತಿ ಹೊಂದಿರುವ ಮತ್ತು ಕನ್ನಡ ಚಲನಚಿತ್ರೋದ್ಯಮದ ಸರ್ವತೋಮುಖ ಬೆಳವಣಿಗೆಗೆ ಕಾರಣೀಭೂತರಾದ ಗಣ್ಯವ್ಯಕ್ತಿಗೆ ನೀಡಲು ಅವಕಾಶವಿದೆ.

ಆ) ಉದ್ಭವಿಸುವುದಿಲ್ಲ.

ವೃತ್ತಿ ರಂಗಭೂಮಿಗೆ ಪ್ರೋತ್ಸಾಹ

2985-ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ): ಮಾನ್ಯ ಯುವಜನಸೇವಾ ಕ್ರೀಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:

ಅ) ನಶಿಸುತ್ತಿರುವ ವೃತ್ತಿ ರಂಗಭೂಮಿಯನ್ನು ಜೀವಂತವಾಗಿ ಉಳಿಸಲು, ಚಲನಚಿತ್ರಗಳಿಗೆ ನೀಡುತ್ತಿರುವಂತೆ ಸಹಾಯಧನವನ್ನು ಅವರಿಗೂ ಸಹ ನೀಡಲು ಸರ್ಕಾರವು ಯೋಜಿಸಿದೆಯೇ?

ಆ) ಹಾಗಿದ್ದಲ್ಲಿ ಯಾವ ರೀತಿಯ ಪ್ರೋತ್ಸಾಹವನ್ನು ನೀಡಲು ಸರ್ಕಾರವು ನಿರ್ಧರಿಸಿದೆ?

ಶ್ರೀ ಎಸ್. ರಮೇಶ್(ಯುವಜನ ಸೇವಾ, ಕ್ರೀಡಾ ಹಾಗೂ ಕನ್ನಡ, ಸಂಸ್ಕೃತಿ ಸಚಿವರು):

ಅ) ವೃತ್ತಿ ನಾಟಕ ಸಂಸ್ಥೆಗಳನ್ನು ಪುನರುಜ್ಜೀವನಗೊಳಿಸಲು ಧನಸಹಾಯ ನೀಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಅ) ಪರಿಶೀಲನೆಯಲ್ಲಿದೆ.

ಬೇಲೂರು ಮತ್ತು ಹಳೇಬೀಡುಗಳ ಪ್ರವಾಸೋದ್ಯಮ ಅಭಿವೃದ್ಧಿ

3048-ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು): ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೇಲೂರು ಮತ್ತು ಹಳೇಬೀಡುಗಳಲ್ಲಿ ಪ್ರವಾಸಿಗರನ್ನು ಆಕರ್ಷಿಸಲು ಪ್ರವಾಸೋದ್ಯಮ ಇಲಾಖೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಾಕಿಕೊಂಡಿರುವ ಕಾರ್ಯಕ್ರಮಗಳೇನು?*

ಆ) *ಈ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಒದಗಿಸಲಾದ ಹಣವೆಷ್ಟು?*

ಶ್ರೀ ಕೆ. ಶಿವಮೂರ್ತಿ (ವಾರ್ತಾ ಮತ್ತು ಪ್ರವಾಸೋದ್ಯಮ ರಾಜ್ಯ ಸಚಿವರು):

ಅ) ಕೇಂದ್ರ ಸರ್ಕಾರದ ನೆರವಿನಡಿಯಲ್ಲಿ ಬೇಲೂರು ಮತ್ತು ಹಳೇಬೀಡುಗಳಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1) ಬೇಲೂರಿನಲ್ಲಿ ಹೆಚ್ಚುವರಿ ವಸತಿ ಸೌಲಭ್ಯದ ನಿರ್ಮಾಣ.

2) ಹಳೇಬೀಡಿನಲ್ಲಿ ಹೊಯ್ಸಳ ಸಂದರ್ಶನ ಕೇಂದ್ರ.

ಆ) 1) ಬೇಲೂರಿನ ಯೋಜನೆಗೆ 43.44 ಲಕ್ಷ ರೂ.ಗಳು.

2) ಹಳೇಬೀಡಿನ ಯೋಜನೆಗೆ 20.00 ಲಕ್ಷ ರೂ.ಗಳು.

ಮಲೆನಾಡು ಅಭಿವೃದ್ಧಿ

3045-ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ(ಬೇಲೂರು): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) *ಮಲೆನಾಡು ಅಭಿವೃದ್ಧಿ ಯೋಜನೆಯ ಅಂಗವಾಗಿ ಹಾಸನ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಿಗೆ ಎಷ್ಟೆಷ್ಟು ಹಣ ಬಿಡುಗಡೆಯಾಗಿದೆ.?*

ಆ) *ಬೇಲೂರು ತಾಲ್ಲೂಕಿಗೆ ಬಿಡುಗಡೆಯಾಗಿರುವ ಹಣದಲ್ಲಿ ತೆಗೆದುಕೊಳ್ಳಬೇಕೆಂದಿರುವ ಕಾಮಗಾರಿಗಳು ಯಾವುವು?*

ಶ್ರೀ ಕೆ.ಹೆಚ್. ಪಾಟೀಲ್(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಮಲೆನಾಡು ಅಭಿವೃದ್ಧಿ ಯೋಜನೆಯು ಈವರೆಗೆ ಅಸ್ತಿತ್ವಕ್ಕೆ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಬೇಲೂರು ತಾಲ್ಲೂಕು ಕಛೇರಿ ಕಟ್ಟಡದ ದುರಸ್ತಿ

3129-ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಬೇಲೂರು): ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತೆರಿಸುವ:

ಅ) *ಬೇಲೂರು ತಾಲ್ಲೂಕು ಕಛೇರಿ ಕಟ್ಟಡ ಶಿಥಿಲವಾಗಿದ್ದು ಈ ಕಟ್ಟಡ ಬದಲಾಯಿಸುವ ಸಲುವಾಗಿ ಹಾಗೂ ತಾಲ್ಲೂಕಿನ ಇತರೆ ಸರ್ಕಾರಿ ಕಟ್ಟಡಗಳಿಗೆ ಕಟ್ಟಡ ಒದಗಿಸುವ ಸಲುವಾಗಿ ಮಿನಿ ವಿಧಾನ ಸೌಧ ಕಟ್ಟಲು ಅಂದಾಜು ತಯಾರಾಗಿಲ್ಲವೆ?*

ಆ) *ಹಾಗಿದ್ದಲ್ಲಿ, ಈ ಮಿನಿ ವಿಧಾನ ಸೌದದ ಕಾರ್ಯ ಎಂದು ಪ್ರಾರಂಭಿಸಲಾಗುವುದು ಹಾಗೂ ಅದರ ಅಂದಾಜು ಮೊಬಲಗೆಷ್ಟು?*

ಶ್ರೀ ಜಿ. ಹೆಚ್ ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಮಂತ್ರಿಗಳು):